ಇಂಗ್ಲಿಷ್ ಮೂಲ: ರಾಬರ್ಟ್ ಗ್ರೇವ್ಸ್
ಕನ್ನಡಕ್ಕೆ: ಬಿ.ಆರ್. ಲಕ್ಷ್ಮಣರಾವ್

# ಸತ್ತವನನ್ನು ಮತ್ತೆ ಜೀವಂತಗೊಳಿಸುವುದು



ಸತ್ತವನನ್ನು ಮತ್ತೆ ಜೀವಂತಗೊಳಿಸುವುದು
ಮಹಾ ಮಂತ್ರವಿದ್ಯೆಯೇನಲ್ಲ;
ಸತ್ತವರೆಲ್ಲ ಪೂರ್ತಿ ಸತ್ತಿರುವುದಿಲ್ಲ.
ಸತ್ತವನ ಬೂದಿ ಮುಚ್ಚಿದ ಕೆಂಡದುಂಡೆಯ ಮೇಲೆ
ಒಮ್ಮೆ ಉಫ಼್ಫೆಂದು ಊದು;
ಭಗ್ಗೆಂದು ಹೊತ್ತಿಕೊಳ್ಳುತ್ತದೆ
ಒಂದು ಜೀವಂತ ಜ್ವಾಲೆ.

ಮರೆತ ಅವನ ದುಃಖ ದುಮ್ಮಾನಗಳು
ಬರಲಿ ಈ ಸದ್ಯಕ್ಕೆ;
ಬರಲಿ ಕಮರಿದ ಅವನ ಭರವಸೆಗಳು.
ಅವನ ಕೈಬರಹಕ್ಕೆ ನಿನ್ನ ಲೇಖನಿಯ ಒಪ್ಪಿಸು
ಅವನ ಸಹಿ ಸಹಜವಾಗಿ
ನಿನ್ನದಾಗುವ ವರೆಗೆ.

ಅವನು ಕುಂಟಿದ ಹಾಗೇ ನೀನೂ ಕುಂಟು;
ಅವನ ಮಾತುಗಳಲ್ಲೇ ಆಣೆಪ್ರಮಾಣ ಮಾಡು;
ಅವನು ಕಪ್ಪು ಬಟ್ಟೆ ತೊಟ್ಟಿದ್ದರೆ ನೀನೂ ತೊಡು;
ಸಂಧಿವಾತದ ಬೆರಳುಗಳು ಅವನದಾಗಿದ್ದರೆ
ನಿನ್ನವೂ ಹಾಗಾಗಲಿ.

ಅವನ ಇಷ್ಟದ ನೆನಪಿನ ವಸ್ತುಗಳ ಜೋಡಿಸು:
ಉಂಗುರ, ಥೈಲಿ, ಕುರ್ಚಿ...
ಆ ಮೂಲವಸ್ತುಗಳ ಸುತ್ತ ನೀ ಕಟ್ಟು
ಅವನಿಗೆ ಸುಪರಿಚಿತ ಮನೆ,
ಆ ಆಸೆಬುರುಕನ ವಾಪಸಾತಿಗಾಗಿ.
ಇನ್ನು ಅವನಿಗೆ ಜೀವದಾನ ಮಾಡು.

ಆದರೆ ಗಣನೆಯಲ್ಲಿರಲಿ,
ಅವನು ವಾಸವಾಗಿದ್ದ ಆ ಗೋರಿಯನ್ನೀಗ
ಹಾಗೇ ಖಾಲಿ ಬಿಡಲಾಗದು.
ನೀನೇ ಸ್ವತಃ ಅಲ್ಲಿ ಮಲಗಬೇಕು
ಅವನ ಕಳಂಕಿತ ಬಟ್ಟೆ ತೊಟ್ಟು.

ಕಲೆ: ವಾಗೀಶ ಹೆಗಡೆ